ಸಿ & ಡಿ ಜಮೀನೆಂದು ಆರ್.ಟಿ.ಸಿ. ಯಲ್ಲಿ ನಮೂದಿಸಿರುವುದು

2135 (2894); ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ)

ಅ) ಗ್ರಾಮೀಣ ಭಾಗದಲ್ಲಿ ಕಂದಾಯ ಇಲಾಖೆಯ ಜಮೀನುಗಳನ್ನು ಸಿ & ಡಿ ಮತ್ತು ಡೀಮ್ಡ್ ಫಾರೆಸ್ಟ್ ಜಮೀನೆಂದು ಆರ್.ಟಿ.ಸಿ. ಯಲ್ಲಿ ನಮೂದಿಸಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ;

ಆ) ಅನಾದಿಕಾಲದಿಂದಲೂ ಭೂಮಿಯನ್ನು ಅನುಭೋಗಿಸಿ, ಮನೆಕಟ್ಟಿಕೊಂಡು ಬಂದಿರುವ ನಿವಾಸಿಗಳು ಅಕ್ರಮ-ಸಕ್ರಮ ಯೋಜನೆಯಡಿ ಅರ್ಜಿ ಸಲ್ಲಿಸಿದ್ದು, ಸಿ & ಡಿ ಡೀಮ್ಡ್ ಫಾರೆಸ್ಟ್ ಎಂದು ನಮೂದಿಸಿದ ಕಾರಣ ಅರ್ಜಿದಾರರಿಗೆ ಭೂಮಿ ಮಂಜೂರಾತಿ ಮಾಡಿಸಿಕೊಳ್ಳುವಲ್ಲಿ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಲಿದೆ?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ಬಂದಿದೆ

ಆ) ಬಂದಿದೆ

ಇ) ಪರಿಶೀಲನೆಯಲ್ಲಿದೆ